ಆದುದರಿಂದ ಈ ಕಾಮಗಾರಿ ವಿಳಂಬವಾಗಿದೆ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದ್ದು, ಅತೀ ಶೀಘ್ರದಲ್ಲಿ ಅರಣ್ಯ ಇಲಾಖೆಯಿಂದ ಅನುಮತಿಯನ್ನು ನಿರೀಕ್ಷಿಸಲಾಗಿದ್ದು, ಅನುಮತಿ ದೊರೆತ ತಕ್ಷಣ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು

ಪಿರಿಯಾಪಟ್ಟಣದಲ್ಲಿ ವಿದ್ಯುತ್ ಲೈನ್ ಕಾಮಗಾರಿಗಳ ವಿಳಂಬ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 148(33)

ಸದಸ್ಯರ ಹೆಸರು ಶ್ರೀ ಬಸವರಾಜು ಹೆಚ್ ಸಿ (ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಆ ಪಾಟೀಲ್(ಇಂಧನ ಸಚಿವರು)

ಪ್ರಶ್ನೆ

ಅ) ಪಿರಿಯಾಪಟ್ಟಣದ ಏತ ನೀರಾವರಿ ಯೋಜನೆಗೆ ಪೂರಕವಾಗಿ ರಾಮನಾಥಪುರದಿಂದ 66 ಕೆ ವಿ ವಿದ್ಯುತ್ ಲೈನ್ ಕಾಮಗಾರಿ ಯಾವ ಹಂತದಲ್ಲಿದೆ?

ಆ) ಸಂಸ್ಥೆಗೆ ಹಣ ಜಮೆ ಮಾಡಿ ಎರಡು ವರ್ಷ ಕಳೆದಿದ್ದರೂ ಕಾಮಗಾರಿ ಪೂರ್ಣವಾಗದಿರಲು ಕಾರಣವೇನು?

ಇ) ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ಹಾಗೂ ಎಂದು ಪೂರ್ಣಗೊಳಿಸಲಾಗುವುದು?

ಉತ್ತರ

ಅ) ಪಿರಿಯಾಪಟ್ಟಣ ತಾಲ್ಲೂಕು ಕರಡಿಲಕ್ಕನಕೆರೆ ಏತ ನೀರಾವರಿ ಯೋಜನೆಗೆ ಉದ್ದೇಶಿತ 66 ಕೆ ವಿ ರಾಮನಾಥಪುರ ಕರಡಿಲಕ್ಕನಕೆರೆ- ಕುಶಾಲನಗರ ವಿದ್ಯುತ್ ಮಾರ್ಗದಿಂದ ಪೂರೈಸಲಾಗುವುದು ಈ ಕಾಮಗಾರಿಗೆ ಒಟ್ಟು 100 ಗೋಪುರಗಳನ್ನು ನಿರ್ಮಿಸಬೇಕಾಗಿದ್ದು, ಈಗಾಗಲೇ 97 ಸ್ಟಬ್‌ಗಳ ಕಾಂಕ್ರೀಟ್ ಕಾಮಗಾರಿ ಪೂರೈಸಲಾಗಿದ್ದು 95 ಗೋಪುರಗಳನ್ನು ನಿರ್ಮಾಣ ಮಾಡಲಾಗಿದೆ 50 ಸ್ಪಾನಗಳಷ್ಟು ವಿದ್ಯುತ್ ವಾಹಕವನ್ನು ಎಳೆಯಲಾಗಿದೆ

ಆ) ಈ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನೆಂದರೆ ಈ ಮಾರ್ಗವು ಗೋಬ್ಲಿ ಅರಣ್ಯ ಪ್ರದೇಶ ಮತ್ತು ಚೆನ್ನಕಲ್ ಕಾವಲ್ ಅರಣ್ಯ ಪ್ರದೇಶದ ಮುಖಾಂತರ ಹಾದು

ಹೋಗಬೇಕಾಗಿದ್ದು ಇದರಲ್ಲಿ ಗೋಬ್ಲಿ ಅರಣ್ಯ ಪ್ರದೇಶದ ಮೂಲಕ ಮೇಲೆ ತಿಳಿಸಿರುವ ವಿದ್ಯುತ್ ಮಾರ್ಗವು ಹಾದು ಹೋಗಲು ಅನುಮತಿಗಾಗಿ ರೂ 2 71 ಲಕ್ಷ ನೀಡಲಾಗಿದ್ದು ಅನುಮತಿ ನಿರೀಕ್ಷಿಸಲಾಗಿದೆ ಚೆನ್ನಕಲ್‌ಕಾವಲ್ ಅರಣ್ಯ ಪ್ರದೇಶದ ಮೂಲಕ ವಿದ್ಯುತ್ ಮಾರ್ಗ ಹಾದು ಹೋಗಲು ಅನುಮತಿ ಕೋರಿ ಬೇಕಾದ ಎಲ್ಲಾ ದಾಖಲೆಗಳನ್ನು ದಿ ಸಿ ಎಪ್ ಮಡಿಕೇರಿರವರ ಮುಖಾಂತರ ಮುಖ್ಯ ಅರಣ್ಯಾಧಿಕಾರಿ ಬೆಂಗಳೂರು ರವರಿಗೆ ಸಲ್ಲಿಸಲಾಗಿದ್ದು ಇನ್ನು ಅವರಿಂದ ಅನುಮತಿ ದೊರಕಿರುವುದಿಲ್ಲ ಆದುದರಿಂದ ಈ ಕಾಮಗಾರಿ ವಿಳಂಬವಾಗಿದ

ಇ) ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗಿದ್ದು ಅತೀ ಶೀಘ್ರದಲ್ಲಿ ಅರಣ್ಯ ಇಲಾಖೆಯಿಂದ ಅನುಮತಿಯನ್ನು ನಿರೀಕ್ಷಿಸಲಾಗಿದ್ದು ಅನುಮತಿ ದೊರೆತ ತಕ್ಷಣ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು

ಕುಟೀರ ಜ್ಯೋತಿ ಯೋಜನೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 149(37)

ಸದಸ್ಯರ ಹೆಸರು ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್(ಇಂಧನ ರಾಜ್ಯ ಸಚಿವರು)

ಪ್ರಶ್ನೆ

ಅ ಕುಟೀರ ಜ್ಯೋತಿ ಯೋಜನೆಯನ್ನು ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 1000 ರಂತೆ ಹಂಚುವುದರಿಂದ ಹೆಚ್ಚು ಜನಸಂಖ್ಯೆ ಹಾಗೂ ಹೆಚ್ಚು ಮನೆಗಳು ಇರುವ ಕ್ಷೇತ್ರಗಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಹಾಗಿದ್ದಲ್ಲಿ ಜನಸಂಖ್ಯೆ ಹಾಗೂ ಮನೆಗಳ ಆಧಾರದ ಮೇಲೆ ಹಂಚಿಕೆ ಮಾಡಲು ಕ್ರಮಗೊಂಡ ಕ್ರಮಗಳೇನು?

ಉತ್ತರ

ಅ ಪ್ರತಿ ಗ್ರಾಮೀಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ 1000 ಫಲಾನುಭವಿಗಳ ಮನೆಗಳಿಗೆ ಹಾಗೂಜ್ಯೋತಿ ಕುಟೀರ ಜ್ಯೋತಿ ಯೋಜನೆಯಡಿ ಪ್ರತಿ ವರ್ಷ ವಿದ್ಯುತ್